ಗೆ
ಉಪ ನಿರ್ದೇಶಕರು
ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆ,
ಪೂರ್ವವಲಯ, ಬೆಂಗಳೂರು.

ಮಾನ್ಯರೆ,

ವಿಷಯ: ದೇವಸಂದ್ರ ವಾರ್ಡ್‌ನ ಜಾಗೃತ ಸಮಿತಿ ಕಾರ್ಯಗಾರ ಕಾರ್ಯಕ್ರಮದ ವರದಿ.

| | | | |
|---|---|---|---|
| ದಿನಾಂಕ | 30/01/2013 | | |
| ಸಮಯ | ಬೆಳಗ್ಗೆ 10.30 ಗಂಟೆಯಿಂದ 11.30 ಗಂಟೆ | | |
| ಸ್ಥಳ | ರಾಜೀವ್ ಗಾಂಧಿನಗರ | | |
| *ಭಾಗವಹಿಸಿದವರ ಸಂಖ್ಯೆ* | 15 ಜನ | | |
| *ಭಾಗವಹಿಸಿದವರು* | 1) ಸಮುದಾಯದಿಂದ | ಜಾಗೃತಿ ಸಮಿತಿ ಸದಸ್ಯರು | |
| | 3)ಸರ್ಕಾರೇತರ ಸಂಸ್ಥೆಗಳು | ಸಿವಿಕ್ ಬೆಂಗಳೂರು | ಅಪ್ಸ |
| | | ಶ್ರೀ.ರಾಮಾಂಜಿ.ಕೆ – ಯೋಜನ ಸಂಯೋಜಕರು, ಕುಮಾರಿ. ಮೈತ್ರ – ಸಹಾಯಕ ಸಂಯೋಜಕರು, | ಶ್ರೀಮತಿ.ಸುಧಾ ಶ್ರೀಮತಿ ರಮಾದೇವಿ |
| *ಕಾರ್ಯಕ್ರಮದ ಉದ್ದೇಶ* | 1. ಜಾಗೃತ ಸಮಿತಿಯ ಸದಸ್ಯರ ಜವಬ್ದಾರಿ ಮತ್ತು ಕರ್ತವ್ಯಗಳನ್ನು ತಿಳಿಸುವುದು.<br>2. ಸಾರ್ವಜನಿಕರಿಗೆ ಪಡಿತರ ವ್ಯವಸ್ಥೆಯ ಬಗ್ಗೆ ಮಾಹಿತಿ ನೀಡುವುದು.<br>3. ಸಾರ್ವಜನಿಕರು ತಮ್ಮ ಸಮಸ್ಯೆಗಳನ್ನು ಮುಕ್ತವಾಗಿ ತಿಳಿಸುವಂತೆ ಮಾಡುವುದು.<br>4. ಸಾರ್ವಜನಿಕರ ಕುಂದುಕೊರತೆಗಳನ್ನು ತಿಳಿದು ಸಂಬಂಧ ಪಟ್ಟ ಇಲಾಖೆಯ ಅಧಿಕಾರಿಗಳಿಂದ ಪರಿಹಾರ ಒದಗಿಸುವುದು.<br>5. ಎಲ್ಲಾ ಕುಂದುಕೊರತೆ/ಸಮಸ್ಯೆಗಳನ್ನು ತಿಳಿದು ಪರಿಹಾರ ಕಂಡುಕೊಂಡು ಪಡಿತರ ವ್ಯವಸ್ಥೆಯು ಉತ್ತಮವಾಗಿ ಅನುಷ್ಠಾನಗೊಳ್ಳುವಂತೆ ಮಾಡುವುದು.<br>6. ನ್ಯಾಯಬೆಲೆ ಅಂಗಡಿಯನ್ನು ಮಾದರಿ ನ್ಯಾಯಬೆಲೆ ಅಂಗಡಿಗಳನ್ನಾಗಿ ಮಾಡುವುದು. | | |

## ಸ್ವಾಗತ:

ಶ್ರೀ ರಾಮಾಂಜಿ : ಕಾರ್ಯಕ್ರಮಕ್ಕೆ ಆಗಮಿಸಿದ್ದ ಅತಿಥಿಗಳಿಗೆ ಮತ್ತು ಸ್ಥಳೀಯ ನಾಗರೀಕರಿಗೆ ಸ್ವಾಗತ ಕೋರುತ್ತಾ, ಕಳೆದಆರು ತಿಂಗಳಿಂದ ರೇಷನ್ ಕಾರ್ಡ್‌ನಲ್ಲಾದ ಬದಲಾವಣೆಯಿಂದಾದ ಸಮಸ್ಯೆಯ ಕುರಿತು ಮತ್ತು ರೇಷನ್ ಅಂಗಡಿ ಸಮಸ್ಯೆಗಳ ಕುರಿತು ಜಾಗೃತಿ ಸಮಿತಿಯ ಸದಸ್ಯರೊಂದಿಗೆ ನೇರವಾಗಿ ಚರ್ಚಿಸಿ, ಪರಿಹಾರವನ್ನು ಕಂಡು ಕೊಳ್ಳುವುದು ಈ ಕಾರ್ಯಕ್ರಮದ ಉದ್ದೇಶವಾಗಿದೆ ಎಂದು ತಿಳಿಸಿದರು.

**ರಾಮಾಂಜಿ:** ಜಾಗೃತಿ ಸಮಿತಿಯ ರಚನೆ ಮತ್ತು ಕರ್ತವ್ಯಗಳ ಬಗ್ಗೆ ತಿಳಿಸಿದರು.
ಜಿಲ್ಲಾಧಿಕಾರಿಗಳು ಅಥವಾ ಉಪ ನಿರ್ದೇಶಕರು ಅಥವಾ ಆಹಾರನೀರೀಕ್ಷಕರು ಸಮಿತಿಯನ್ನು ಆಯ್ಕೆ ಮಾಡುತ್ತಾರೆ.

- 9 ಜನ ಸದಸ್ಯರು ಸಮಿತಿಯಲ್ಲಿ ಇರಬೇಕು.

- 3ಜನ ಮಹಿಳೆಯರು (ಬಿಪಿಎಲ್/ಅಂತ್ಯೋದಯ ಚೀಟಿ ಹೊಂದಿರುವವರು) (1 ಎಸ್‌ಸಿ, 1ಎಸ್‌ಟಿ, 1 ಒಬಿಸಿ)
- ಪಾಲಿಕೆ ಅಧ್ಯಕ್ಷರು –1
- ಪಾಲಿಕೆ ಉಪಾಧ್ಯಕ್ಷರು –1
- 1 ಸ್ಥಳೀಯ ಚುನಾಯಿತ ಸದಸ್ಯರು
- 2 ಸಮಾಜಸೇವಕರು/ಮಹಿಳಾ ಸ್ವ–ಸಹಾಯ ಗುಂಪಿನ ಸದಸ್ಯೆ.
- ವಾರ್ಡ್‌ನ ಕಂದಾಯ ನೀರಿಕ್ಷಕರು –1

ಕರ್ತವ್ಯಗಳು

1. ಕನಿಷ್ಠ ಪ್ರತಿ 3 ತಿಂಗಳಿಗೊಮ್ಮೆ ಸಭೆ ಸೇರಬೇಕು
2. ಆಹಾರ ಧಾನ್ಯಗಳ ಗುಣಮಟ್ಟ ಪರಿಶೀಲನೆ
3. ತೂಕಗಳ ಪರಿಶೀಲನೆ ಮತ್ತು ತೂಕದ ಯಂತ್ರಗಳ ತಪಾಸಣೆ ಕುಂದುಕೊರತೆಗಳ ನಿವಾರಣೆ.
4. ನ್ಯಾಯಬೆಲೆ ಅಂಗಡಿಯವರು ನಿಗಧಿತ ವೇಳೆಯಲ್ಲಿ ಬಾಗಿಲು ತೆರೆದು ಪಡಿತರ ವಿತರಣೆ ಕಾರ್ಯವನ್ನು ನಿರ್ವಹಿಸುತ್ತಿರುವವರೇ? ನಿಗಧಿಪಡಿಸಿರುವ ಅವಧಿಯಲ್ಲಿ ಕಾರ್ಯನಿರ್ವಹಿಸುತ್ತಿರುವರೇ?
5. ನ್ಯಾಯಬೆಲೆ ಅಂಗಡಿ ಮಾಲೀಕರು ಮಾಹೆಯಾನ ಅವರಿಗೆ ಹಂಚಿಕೆ ಮಾಡಿರುವ ದಾಸ್ತಾನನ್ನು ನಿಗಧಿತ ಸಮಯದಲ್ಲಿ ಎತ್ತುವಳಿ ಮಾಡುತ್ತಿರುವವರೇ?
6. ನ್ಯಾಯಬೆಲೆ ಅಂಗಡಿಯವರು ಪಡಿತರ ವಸ್ತುಗಳನ್ನು ನಿಗಧಿತ ದರ ಹಾಗೂ ನಿಗಧಿತ ಪ್ರಮಾಣದಲ್ಲಿ ವಿತರಿಸುತ್ತಿರುವರೇ?
7. ನ್ಯಾಯಬೆಲೆ ಅಂಗಡಿಯಲ್ಲಿ ಅಗತ್ಯ ಪ್ರಮಾಣದ ಆಹಾರಧಾನ್ಯಗಳನ್ನು ಮಾಹೆಯ ಎಲ್ಲಾ ದಿನಗಳಲ್ಲೂ ಪಡಿತರ ಚೀಟಿದಾರರಿಗೆ ಲಭ್ಯವಾಗುವಂತೆ ನಿರ್ವಹಿಸುತ್ತಿರುವವರೇ?
8. ನ್ಯಾಯಬೆಲೆ ಅಂಗಡಿ ವ್ಯಾಪ್ತಿಯ ಪಡಿತರ ಚೀಟಿದಾರರು ಪಡಿತರವನ್ನು ಪಡೆದುಕೊಳ್ಳುವಲ್ಲಿ ಎದುರಿಸುತ್ತಿರುವ ಸಮಸ್ಯೆಗಳೇನಾದರೂ ಇದ್ದರೆ ಅಂತಹ ಸಮಸ್ಯೆಗಳ ಬಗ್ಗೆ ಪರಿಶೀಲಿಸುವುದು.
9. ನ್ಯಾಯಬೆಲೆ ಅಂಗಡಿಯವರು ಎಲ್ಲಾ ಮಾಹಿತಿಗಳನ್ನೊಳಗೊಂಡಂತೆ ಲಭ್ಯವಿರುವ ದಾಸ್ತಾನು, ದರ ಮತ್ತು ವಿತರಣಾ ಪ್ರಮಾಣ ಸೂಚಿಸುವ 3. 3. 3. ವಿವರಗಳುಳ್ಳ ಫಲಕವನ್ನು ಹಾಗೂ ಪಡಿತರ ವಿತರಣೆಯ ಸಮಯವನ್ನು ಪ್ರದರ್ಶಿಸುವವರೇ?
10. ನ್ಯಾಯಬೆಲೆ ಅಂಗಡಿಯವರು ವಿತರಿಸುವ ಪ್ರಮಾಣಕ್ಕೆ ಪಡಿತರ ಚೀಟಿದಾರರಿಗೆ ಬಿಲ್ಲನ್ನು ನೀಡುತ್ತಿರುವರೇ? ಎಂಬುದರ ಬಗ್ಗೆ ಪರಿಶೀಲಿಸಿ ಸರಿಪಡಿಸುವುದು.
11. ನ್ಯಾಯಬೆಲೆ ಅಂಗಡಿಗಳ ಮೂಲಕ ವಿತರಿಸಲಾಗುತ್ತಿರುವ ಆಹಾರಧಾನ್ಯಗಳ ಗುಣಮಟ್ಟವುತೃಪ್ತಿಕರವಾಗಿದೆಯೇ?
12. ನ್ಯಾಯಬೆಲೆ ಅಂಗಡಿಯವರು ಉಪಯೋಗಿಸುತ್ತಿರುವ ತೂಕ ಮತ್ತು ಅಳತೆಯ ಬೊಟ್ಟುಗಳನ್ನು ಅಳತೆ ಮತ್ತು ತೂಕ ಮಾಪನ ಇಲಾಖೆಯಿಂದ ದೃಢೀಕರಿಸಿಕೊಳ್ಳಲಾಗಿದೆಯೇ?.
13. ನ್ಯಾಯಬೆಲೆ ಅಂಗಡಿಗಳಲ್ಲಿನ ಲೋಪದೋಷಗಳು ಏನದರೂ ಇದ್ದಲ್ಲಿ, ಅದರ ಬಗ್ಗೆ ವರದಿಯನ್ನು ಸಮಿತಿಯ ಸದಸ್ಯ ಕಾರ್ಯದರ್ಶಿಯವರು ಸಂಬಂಧಪಟ್ಟ ತಹಶೀಲ್ದಾರರಿಗೆಸಲ್ಲಿಸುವುದು.
14. ಸಮಿತಿಯು ನಡವಳಿ ವಹಿಯನ್ನು ನಿರ್ವಹಿಸತಕ್ಕದ್ದು ಮತ್ತು ಪ್ರತಿ ಸಭೆ ನಡೆದ ಒಂದು ವಾರದೊಳಗೆ ಸಂಬಂಧಪಟ್ಟ ತಹಶೀಲ್ದಾರವರಿಗೆ ಸಭೆಯ ನಡವಳಿಯನ್ನು ಸಲ್ಲಿಸತಕ್ಕದ್ದು,
15. ತಹಶೀಲ್ದಾರ್‌ರವರು ಕ್ರೋಡೀಕೃತ ವರದಿಯನ್ನು ತಾಲ್ಲೂಕು ಮಟ್ಟದ ಜಾಗೃತ ಸಮಿತಿಯಲ್ಲಿ ಚರ್ಚಿಸಿ ಸೂಕ್ತ ಕ್ರಮ ವಹಿಸುವುದು.
16. ಸುಪ್ರೀಂ ಕೋರ್ಟ್ ನ ಎಲ್ಲಾ ಆದೇಶಗಳನ್ನು ಖಡ್ಡಾಯವಾಗಿ ಪಾಲಿಸಬೇಕು.

ಮಾಹಿತಿ ಫಲಕ : ಮಾಹಿತಿ ಫಲಕವನ್ನು ಈ ಕೆಳಕಂಡ ಎಲ್ಲಾ ಮಾಹಿತಿಯೊಂದಿಗೆ ಬರೆಯಬೇಕು.

- ಅಂಗಡಿ ಪ್ರಾರಂಭಿಸಿದ ದಿನಾಂಕ ಮತ್ತು ಅಂಗಡಿ ಸಂಖ್ಯೆ
- ಪ್ರಾಧಿಕಾರಣದಾರರ ಹೆಸರು
- ಅಂಗಡಿ ತೆಗೆಯುವ ದಿನ ಮತ್ತು ಸಮಯ

- ಒಟ್ಟು ಕಾರ್ಡ್‌ದಾರರ ಸಂಖ್ಯೆ
- ಇಲಾಖೆಯಿಂದ ಬಂದ ಆಹಾರ ಧಾನ್ಯಗಳ ವಿವರ ಮತ್ತು ಅದರ ಬೆಲೆ
- ಪ್ರಾರಂಭಿಕ ಮತ್ತು ಅಂತಿಮ ದಾಸ್ತಾನು ವಿವರ
- ಜಾಗೃತಿ ಸಮಿತಿ ಸದಸ್ಯರ ಸಂಪೂರ್ಣ ವಿವರದ ಪಟ್ಟಿಯನ್ನು ಮಾಹಿತಿ ಫಲಕದಲ್ಲಿ ಬರೆಯಬೇಕು (ಸಂಪೂರ್ಣ ಹೆಸರು, ವಿಳಾಸ ಮತ್ತು ದೂರವಾಣಿ ಸಂಖ್ಯೆ)
- 6 ಕಂತುಗಳಲ್ಲಿ ಪಡಿತರ ಪಡೆಯುವುದು
- ವಾರದಲ್ಲಿ ಆರು ದಿನ ಪಡಿತರ ವಿತರಿಸುವ ಸೌಲಭ್ಯ
- ಹಸಿವಿನಿಂದ ಸಾವು ಉಂಟಾದಲ್ಲಿ ಮುಖ್ಯ ಕಾರ್ಯದರ್ಶಿ ಹೊಣೆ
- ವಹಿವಾಟಗಳನ್ನು ಪರಿಶೀಲಿಸಲು ರಾಜ್ಯದಲ್ಲಿ ಆಯುಕ್ತರು
- ಬಡತನ ರೇಖೆಗಿಂತ ಕೆಳಗಿರುವ ಎಲ್ಲಾ ವರ್ಗದ ಜನರನ್ನು ಗುರುತಿಸಿ ಕಾರ್ಡುಗಳನ್ನು ವಿತರಿಸುವುದು
- ಸರ್ವೋಚ್ಚ ನ್ಯಾಯಾಲಯದ ಆಯುಕ್ತರ ರಾಜ್ಯ ಸಹಾಯಕ ಸಲಹೆಗಾರರು ಕ್ಲಿಫ್ಟನ್ ರೊಸೊರಿಯೊ(ವಕೀಲರು) ದೂರವಾಣಿ: 9448135832 (ಸಮಸ್ಯೆಗಳು ಕಂಡು ಬಂದಲ್ಲಿ ನೇರವಾಗಿ ದೂರನ್ನು ನೀಡಬಹುದು)
- ಸಹಾಯವಾಣಿ: ನಿಯಂತ್ರಣ ಕೊಠಡಿ ಸಂಖ್ಯೆ: 18004259339 (ಇದು ಉಚಿತ ಕರೆ)
- www.ahara.kar.nic.in ಆಹಾರ ಇಲಾಖೆಯ ವೆಬ್ ಸೈಟ್ ಮತ್ತು ರೇಷನ್ ಅಂಗಡಿಯ ಕಾರ್ಯಗಳು ಮತ್ತು ರೇಷನ್ ಕಾರ್ಡ್‌ನ ಉದ್ದೇಶವನ್ನು ತಿಳಿಸಿದರು

**೦ ಜಾಗೃತಿ ಸಮಿತಿ ಸದಸ್ಯರ ಸಮಿತಿ ಬಗ್ಗೆಗಿನ ಅನ್ನಿಸಿಕೆಗಳು**

- ಪಡಿತರ ಅಂಗಡಿಯಲ್ಲಿ ನಾವು ಇದುವರೆಗು ಸಭೆ ನೆಡಿದಿರುವುದರ ಬಗ್ಗೆ ಸದಸ್ಯರಿಗೆ ಮಾಹಿತಿ ಇಲ್ಲ.
- ಸಮಿತಿ ಸದಸ್ಯರಾಗಿರುವ ಬಗ್ಗೆ ಸದಸ್ಯರಿಗೆ ಮಾಹಿತಿ ಇಲ್ಲ.
- ಇಲಾಖೆಯು ಜಾಗೃತಿ ಸಮಿತಿಯ ಸದಸ್ಯರ ಪಟ್ಟಿಯಲ್ಲಿ ವಿಳಾಸ ಮೋಬೈಲ್ ಸಂಖ್ಯೆ ಬಗ್ಗೆ ಮಾಹಿತಿ ಇಲ್ಲ.
- ಇಲಾಖೆಯು ನೀಡಿದ ಸಮಿತಿ ಸದಸ್ಯರ ವಿಳಾಸಗಳು ಬಹುತೇಕ ಅಪೂರ್ಣ ಮತ್ತು ದೂರವಾಣಿ ಸಂಖ್ಯೆಗಳು ಇಲ್ಲ.
- ಒಬ್ಬ ಸದಸ್ಯರು 'ಪಡಿತರ ಅಂಗಡಿಯ ಮಾಲೀಕರು ಪ್ರತಿ ತಿಂಗಳು ಒಂದು ಪುಸ್ತಕದಲ್ಲಿ ಸಹಿ ಪಡೆಯುತ್ತಿದ್ದು, ಯಾವ ಕಾರಣಕ್ಕೆ ಸಹಿ ತೆಗೆದುಕೊಳ್ಳುತ್ತಿದ್ದರು ಎಂಬುದು ತಿಳಿದಿಲ್ಲ'

ಶಿಫಾರಸ್ಸುಗಳು:

1. ಜಾಗೃತ ಸಮಿತಿಯನ್ನು ಒಂದು ಅಂಗಡಿಯ ಎಲ್ಲಾ ಪಡಿತರ ಚೀಟಿದಾರರ ಸಮ್ಮುಖದಲ್ಲಿ ಚುನಾಯಿಸುವುದು.
2. ಸಿಮೆಯೆಣ್ಣೆ ಚಿಲ್ಲರೆ ಅಂಗಡಿಗೂ ಪ್ರತ್ಯೇಕ ಜಾಗೃತ ಸಮಿತಿರಚನೆ ಮತ್ತು ಇದರಲ್ಲಿ ಎಪಿಎಲ್ ಪಡಿತರ ಚೀಟಿದಾರರನ್ನು ಒಳಗೊಳ್ಳುವಂತೆ ಸಮಿತಿ ರಚನೆ.
3. ಜಾಗೃತ ಸಮಿತಿಯ ಇರುವಿಕೆ, ಸದಸ್ಯರ ವಿಳಾಸ ಮತ್ತು ದೂರವಾಣಿ ಸಂಪರ್ಕ ಹಾಗೂ ಜವಾಬ್ದಾರಿ–ಅಧಿಕಾರಗಳ ಕುರಿತಾಗಿ ಸಮುದಾಯಗಳಲ್ಲಿ ಮತ್ತು ಮಾಧ್ಯಮಗಳಲ್ಲಿ ವ್ಯಾಪಕ ಪ್ರಚಾರ.
4. ಜಾಗೃತ ಸಮಿತಿಯ ಸದಸ್ಯರಿಗೆ ಅವರ ಕರ್ತವ್ಯ ಮತ್ತು ಅಧಿಕಾರಗಳ ಬಗ್ಗೆ ಸೂಕ್ತ ತರಬೇತಿ
5. ಆಹಾರ ನಿರೀಕ್ಷಕರನ್ನು ಸಮಿತಿಗೆ ಮೇಲ್ವಿಚಾರಕರಾಗಿ ನೇಮಕ ಮಾಡುವುದು.
6. ಜಾಗೃತ ಸಮಿತಿಯ ಸಭೆಗಳನ್ನು ಸಾರ್ವಜನಿಕ ಸ್ಥಳಗಳಲ್ಲಿ ನಡೆಸುವುದು ಮತ್ತು ಎಲ್ಲಾ ಸಭೆಗಳಲ್ಲಿ ಆಹಾರ ನಿರೀಕ್ಷಕರ ಹಾಜರಿಯಲ್ಲಿ ನಡೆಸಬೇಕು.
7. ಜಾಗೃತ ಸಮಿತಿಯು ಪ್ರತಿ ತಿಂಗಳಿಗೊಮ್ಮೆ ಸಭೆ ನಡೆಸುವುದು ಮತ್ತು ಎರಡು ಬಾರಿ ಪಡಿತರ ಅಂಗಡಿಯ ತಪಾಸಣೆಗೆ ಅವಕಾಶ.
8. ಜಾಗೃತ ಸಮಿತಿಗೆ ಪಡಿತರ ಅಂಗಡಿ ಮಾಲೀಕನನ್ನು ಶಿಕ್ಷಿಸುವ/ಶಿಫಾರಸ್ಸು ಮಾಡುವ ಅಧಿಕಾರಗಳು.

9. ಆ ಸಭೆಗಳಲ್ಲಿ ಸಾಮಾನ್ಯ ಜನರು ಭಾಗವಹಿಸಲು ಮತ್ತು ಅವರ ಕುಂದುಕೊರತೆಗಳ ಕುರಿತಾಗಿ ಚರ್ಚೆ ಮಾಡಲು ಅವಕಾಶ ಒದಗಿಸುವುದು.

ಅಪ್ಸ ಸಂಸ್ಥೆಯ ರಮಾದೇವಿಯವರು ಸಮಿತಿ ಸದಸ್ಯರು ಮತ್ತು ಸರ್ಕಾರೇತರ ಸಂಸ್ಥೆ ಗಳಿಂದ ಬಂದ ಸಲಹೆಗಳನ್ನು ಇಲಾಖೆಯ ಮುಂಖಾತರ ಆಳವಡಿಸಿಕೊಳ್ಳುವುದಾಗಿ ತಿಳಿಸಿ ಕಾರ್ಯಕ್ರಮವನ್ನು ಮುಕ್ತಾಯ ಮಾಡಿದರು.

ಈ ಮೇಲಿನ ಸಲಹೆಗಳನ್ನು ನೀಡುತ್ತಾ ಸೂಕ್ತ ಕ್ರಮ ಕೈಗೊಂಡು ಜಾಗೃತ ಸಮಿತಿಗಳನ್ನು ಬಲಪಡಿಸಬೇಕಾಗಿ ವಿನಂತಿ

ರಾಮಾಂಜಿ.ಕೆ
ಯೋಜನೆಯ ಸಂಯೋಜಕರು
ಸಿವಿಕ್ ಬೆಂಗಳೂರು ಸಂಸ್ಥೆ
ವರದಿ